ಇದೇ ವರ್ಷ ಬಿಡುಗಡೆಯಾದ ‘ಡಿಗ್ರಿ ಕಾಲೇಜ್’ ಸಿನಿಮಾ ಮೂಲಕ ದಿವ್ಯಾ ತೆಲುಗು ಚಿತ್ರರಂಗಕ್ಕೂ ಅಡಿಯಿಟ್ಟಿದ್ದಾರೆ. ವೃತ್ತಿಬದುಕಿನ ಆರಂಭದಲ್ಲಿಯೇ ಮತ್ತೊಂದು ಭಾಷೆಯ ಚಿತ್ರದಲ್ಲಿ ನಟಿಸುವ ಅವಕಾಶ ಸಿಕ್ಕಿ, ಜನರಿಂದಲೂ ಸಾಕಷ್ಟು ಮೆಚ್ಚುಗೆ ದೊರೆತಿರುವುದು ಅವರ ಆತ್ಮವಿಶ್ವಾಸವನ್ನು ಹೆಚ್ಚಿಸಿದೆ. ಹಾಗೆಂದು ತೆಲುಗುಭಾಷೆಗೇ ಪೂರ್ತಿಯಾಗಿ ವಲಸೆ ಹೋಗಿಲ್ಲ ಅವರು. ಅವರು ನಾಯಕಿಯಾಗಿ ನಟಿಸಿರುವ ಕನ್ನಡದ ‘ರೌಡಿ ಬೇಬಿ’, ಕೊರೊನಾ ತೆರೆ ಸರಿದ ಮೇಲೆ ತೆರೆಗೆ ಬರಲು ಸಜ್ಜಾಗಿದೆ. ಆ ಚಿತ್ರದ ಬಗ್ಗೆ ಸಾಕಷ್ಟು ನಿರೀಕ್ಷೆಯೂ ದಿವ್ಯಾ ಅವರಿಗಿದೆ.

‘ರೌಡಿ ಬೇಬಿ’ ತುಂಬ ಒಳ್ಳೆಯ ಸಿನಿಮಾ. ಇದರಲ್ಲಿ ನನ್ನ ಪಾತ್ರಕ್ಕೂ ಸಾಕಷ್ಟು ಸ್ಕೋಪ್ ಇದೆ. ನಾನು ನಿಜಜೀವನದಲ್ಲಿ ಹೇಗಿರುತ್ತೇನೆಯೋ ಅಂಥದ್ದೇ ಪಾತ್ರದಲ್ಲಿ ನಟಿಸುವ ಅವಕಾಶ ಸಿಕ್ಕಿದೆ. ಹಾಗಾಗಿ ನನಗೆ ತುಂಬ ಬೇಗ ಈ ಕತೆ, ಪಾತ್ರ ಕನೆಕ್ಟ್ ಆಯಿತು. ಹಾಗಾಗಿ ಒಪ್ಪಿಕೊಂಡೆ. ಚಿತ್ರದಲ್ಲಿ ಕಾಲೇಜಿಗೆ ಹೋಗುವ ತರ್ಲೆ ಹುಡುಗಿಯಾಗಿ ಕಾಣಿಸಿಕೊಂಡಿದ್ದೇನೆ. ಎಲ್ರೂ ನನ್ನನ್ನು ರೌಡಿ ಎಂದು ಕರೆಯುತ್ತಾರೆ. ನಾನು ಹೀರೊಗೆ ಬೇಬಿ ಎಂದು ಕರೆಯುತ್ತೇನೆ’ ಎಂದು ಚಿತ್ರದ ಕುರಿತು ಉತ್ಸಾಹದಿಂದ ಮಾತಾಡುತ್ತಾರೆ.

ಸದ್ಯಕ್ಕೆ ತೆಲುಗು ಸಿನಿಮಾವೊಂದಕ್ಕೆ ಸಹಿ ಹಾಕಿರುವ ದಿವ್ಯಾ, ಜೀ ಕನ್ನಡದ ರಿಯಾಲಿಟಿ ಶೋ ಒಂದರಲ್ಲಿ ಭಾಗವಹಿಸಲೂ ಸಜ್ಜಾಗುತ್ತಿದ್ದಾರೆ. ‘ನನಗೆ ಸಿನಿಮಾದ ಕತೆ ಮತ್ತು ನನ್ನ ಪಾತ್ರ ತುಂಬ ಮುಖ್ಯ. ಇಡೀ ಸಿನಿಮಾದಲ್ಲಿ ನಾನು ಬರೀ 20 ನಿಮಿಷವಷ್ಟೇ ತೆರೆಯ ಮೇಲೆ ಬರುವುದಾದರೂ ಪರವಾಗಿಲ್ಲ. ಆದರೆ ಸಿನಿಮಾ ಮುಗಿಸಿ ಹೋಗುವಾಗ ಜನರು ಆ 20 ನಿಮಿಷದ ಬಗ್ಗೆಯೇ ಮಾತಾಡಬೇಕು. ಅದು ಬಿಟ್ಟು ಸ್ಲೋಮೋಷನ್‌ನಲ್ಲಿ ಓಪನ್ ಹೇರ್ ಬಿಟ್ಕೊಂಡು ಅಡ್ಡಾಡುವ ಪಾತ್ರಗಳಲ್ಲಿ ಆಸಕ್ತಿಯಿಲ್ಲ’ ಎಂದು ಸ್ಪಷ್ಟವಾಗಿ ಹೇಳುವ ದಿವ್ಯಾಗೆ ಮುಂದೆ ಕನ್ನಡ ಮತ್ತು ತೆಲುಗು ಎರಡೂ ಚಿತ್ರರಂಗದಲ್ಲಿ ಒಳ್ಳೆಯ ನಟಿ ಅನಿಸಿಕೊಳ್ಳಬೇಕು ಎಂಬ ಆಸೆ ಇದೆ.

ಅನುಷ್ಕಾ ಶೆಟ್ಟಿಯನ್ನು ರೋಲ್ ಮಾಡೆಲ್ ಆಗಿಸಿಕೊಂಡಿರುವ ಅವರಿಗೆ ‘ಅರುಂಧತಿ’ಯಂಥ ಸಿನಿಮಾದಲ್ಲಿ ನಟಿಸಬೇಕು ಎಂಬ ಹಂಬಲವೂ ಇದೆ.

‘ರೌಡಿ ಬೇಬಿ ಸಿನಿಮಾ ಬಿಡುಗಡೆಯನ್ನು ಎದುರು ನೋಡುತ್ತಿದ್ದೇನೆ. ಈ ಚಿತ್ರದಲ್ಲಿನ ಪಾತ್ರ ನನಗೆ ಇನ್ನಷ್ಟು ಒಳ್ಳೆಯ ಅವಕಾಶಗಳನ್ನು ತಂದುಕೊಡುತ್ತದೆ ಎಂಬ ನಂಬಿಕೆ ಇದೆ. ತೆರೆಯ ಮೇಲಷ್ಟೇ ಅಲ್ಲ, ತೆರೆಯ ಆಚೆಗೂ ಗೌರವಯುತವಾದ ಸ್ಥಾನವನ್ನು ಪಡೆದುಕೊಳ್ಳಬೇಕು. ಜನರು ನಮ್ಮನ್ನು ನೋಡಿ ಸ್ಫೂರ್ತಿ ಪಡೆದುಕೊಳ್ಳುವ ಹಾಗೆ ಬದುಕಬೇಕು ಎಂಬ ಆಸೆ ನನ್ನದು’ ಎನ್ನುವ ದಿವ್ಯಾ ಲಾಕ್‌ಡೌನ್ ತೆರವು ತನ್ನ ಬದುಕಿನ ಹೊಸ ತಿರುವನ್ನೂ ತೆರೆಯುತ್ತದೆ ಎಂಬ ಭರವಸೆಯಲ್ಲಿದ್ದಾರೆ. ■

# ಪಾಪ, ಶರ್ಮಿಳಾ!

ಕೊರೊನಾ ಎಂಬ ಸೂಕ್ಷ್ಮಾಣುಜೀವಿ ಇಡೀ ಜಗತ್ತನ್ನೇ ಕಂಗೆಡಿಸಿ ಗೃಹಬಂಧನಕ್ಕೆ ನೂಕಿ ಅಟ್ಟಹಾಸಗೈಯುತ್ತಿದೆ. ಸಾಮಾಜಿಕ ಅಂತರ ಕಾಯ್ದುಕೊಳ್ಳುವುದೊಂದೇ ದಾರಿ ಎಂದು ಜನರೆಲ್ಲ ಮನೆಯಲ್ಲೇ ಉಳಿದುಕೊಳ್ಳುವಂತೆ ಲಾಕ್‌ಡೌನ್ ಕೂಡ ಘೋಷಣೆಯಾಗಿದೆ. ಆದರೆ ನಿಯಮಗಳನ್ನು ಗಾಳಿಗೆ ತೂರುವುದರಲ್ಲಿ ನಮ್ಮ ಸೆಲೆಬ್ರಿಟಿಗಳು, ರಾಜಕಾರಣಿಗಳು ಯಾವಾಗಲೂ ಎತ್ತಿದ ಕೈ. ಕೊರೊನಾ ಸೋಂಕು ತಗುಲಿಸಿಕೊಂಡಿರುವ ಕನಿಕಾ ಕಪೂರ್ ಗಣ್ಯರ ಜೊತೆ ಪಾರ್ಟಿ ಮಾಡಿದ್ದು, ರಾಷ್ಟ್ರಪತಿಗಳನ್ನೂ ಭೇಟಿಯಾಗಿದ್ದೆಲ್ಲ ಜೋರು ಸುದ್ದಿಯಾಗಿತ್ತು. ಕನ್ನಡ ಚಿತ್ರರಂಗವೂ ನಾವು ಈ ವಿಷಯದಲ್ಲಿ ಬಾಲಿವುಡ್‌ಗೆ ಏನೂ ಕಮ್ಮಿ ಇಲ್ಲ ಎಂದು ತೋರಿಸಿಕೊಳ್ಳುವ ಪ್ರಸಂಗವೊಂದು ಇಲ್ಲಿಯೂ ನಡೆದಿದೆ.

ಹೀಗೆ ಕೆಟ್ಟ ಮಾದರಿಯ ಮೂಲಕ ಚಿತ್ರರಂಗದ ವಿಖ್ಯಾತಿಯನ್ನು ಗಗನಕ್ಕೇರಿಸಲು ಹೊರಟವರು ನಟಿ ಶರ್ಮಿಳಾ ಮಾಂಡ್ರೆ. ಇತ್ತೀಚೆಗೆ ನಡುರಾತ್ರಿಯಲ್ಲಿ ಅವರು ಪ್ರಯಾಣಿಸುತ್ತಿದ್ದ ಕಾರು ಬೆಂಗಳೂರಿನ ವಸಂತನಗರದ ಕೆಳಸೇತುವೆಯ ಬಳಿ ಕಂಬಕ್ಕೆ ಡಿಕ್ಕಿ ಹೊಡೆದು ತಲೆಗೆ ಪೆಟ್ಟು ಮಾಡಿಕೊಂಡು ಆಸ್ಪತ್ರೆಗೆ ಸೇರಿದ್ದಾರೆ. ಅಷ್ಟೇ ಅಲ್ಲ, ಆ ಕಾರಿಗೆ ಕೆಎಸ್‌ಪಿ (ಕರ್ನಾಟಕ ರಾಜ್ಯ ಪೊಲೀಸ್ ಕ್ಲಿಯರ್ ಪಾಸ್) ಅಂಟಿಸಲಾಗಿತ್ತು ಎಂಬ ಅಂಶವೂ ಗಮನಕ್ಕೆ ಬಂದಿದೆ. ಅವರ ಕಾರಿನ ಜೊತೆಗೆ ಇನ್ನೂ ಎರಡು ಕಾರುಗಳು ಬರುತ್ತಿದ್ದವು, ಅವರೆಲ್ಲ ಎಲ್ಲಿಯೋ ಪಾರ್ಟಿ ಮುಗಿಸಿಕೊಂಡು ಮರಳುತ್ತಿದ್ದರು ಎಂಬ ಸುದ್ದಿಗಳು ಓಡಾಡುತ್ತಿವೆ. ಶರ್ಮಿಳಾ ‘ಹೊಟ್ಟೆನೋವಿನ ಔಷಧಿ ತರಲು ಬಂದಿದ್ದೆ’ ಎಂದು ಆಸ್ಪತ್ರೆಯಲ್ಲಿ ಹೇಳಿಕೆ ಕೊಟ್ಟಿದ್ದಾರೆ!

ಪಾಪ, ಅವರ ಪರಿಸ್ಥಿತಿ ಅರ್ಥವಾಗುವಂಥದ್ದೇ. ವಾರಗಳಿಂದ ಮನೆಯಲ್ಲಿಯೇ ಇದ್ದು, ‘ಔಷಧಿ ಸ್ಟಾಕ್’ ಎಲ್ಲ ಖಾಲಿಯಾಗಿತ್ತೇನೋ. ಹೊಟ್ಟೆನೋವಿನಿಂದ ನರಳುತ್ತಿದ್ದ ಅವರೊಬ್ಬರನ್ನೇ ‘ಔಷಧಿ ಅಂಗಡಿ’ಗೆ ಕಳಿಸಲಾಗುತ್ತದೆಯೇ? ಅಲ್ಲದೆ ಈಗ ಔಷಧಿ ಅಂಗಡಿಗಳೆಲ್ಲ ಎಷ್ಟು ತೆರೆದಿರುತ್ತವೆ, ಎಷ್ಟು ದೂರ ಹುಡುಕಿಕೊಂಡು ಹೋಗಬೇಕಾಗುತ್ತದೆ ಎಂದು ಹೇಳುವುದು ಕಷ್ಟ. ಸಂಕಷ್ಟದಲ್ಲಿ ಒದಗಿಬರುವವರು ಫ್ರೆಂಡ್ಸೇ ತಾನೆ? ಹಾಗಾಗಿ ಮೂರು ನಾಲ್ಕು ಕಾರುಗಳನ್ನು ಜೊತೆಯಾಗಿಸಿಕೊಂಡು, ಅದರಲ್ಲೆಲ್ಲ ಫ್ರೆಂಡ್ಸ್‌ಗಳನ್ನೇ ತುಂಬಿಕೊಂಡು ‘ಔಷಧಿ ಶೋಧ’ಕ್ಕೆ ಹೋಗಿರುತ್ತಾರೆ. ‘ಟಾನಿಕ್’ ಸಿಕ್ಕ ಖುಷಿಗೇ, ಹೊಟ್ಟೆನೋವಿನ ತಾತ್ಕಾಲಿಕ ಶಮನಕ್ಕೆ ಸಿಕ್ಕ ಜಾಗದಲ್ಲಿಯೇ ಒಂದಿಷ್ಟು ‘ಇಳಿಸಿಕೊಂಡು’ ವಾಪಸ್ ಆಗುವ ಎಂದು ಆಲೋಚನೆ ಮಾಡಿರಬಹುದು. ಅಥವಾ ಔಷಧ ಸೇವನೆಗಾಗಿಯೇ ಒಂದು ನಿರ್ದಿಷ್ಟ ಜಾಗ ಗೊತ್ತುಪಡಿಸಿಕೊಂಡು ಅಲ್ಲಿ ಹೋಗಿ ಸೇವನೆ ಮಾಡಿರಲೂ ಬಹುದು. ಲಾಕ್‌ಡೌನ್ ಟೈಮಲ್ಲೂ ಜೊತೆಗೆ ಬಂದ ಸ್ನೇಹಿತರನ್ನು ಬಿಟ್ಟು ಒಬ್ಬರೇ ಔಷಧಿ ತೆಗೆದುಕೊಂಡರೆ ‘ಪರಮಾತ್ಮ’ ಮೆಚ್ಚುವನೇ? ಹಾಗಾಗಿ ಭವಿಷ್ಯದಲ್ಲಿ ಅವರಿಗೆ ಹೊಟ್ಟೆನೋವು ಬರಬಾರದು ಎಂಬ ಕಾರಣಕ್ಕೆ ಮುನ್ನೆಚ್ಚರಿಕೆಯಾಗಿ ಅವರ ಬಾಯಲ್ಲೂ ಇಷ್ಟಿಷ್ಟು ಇಳಿಬಿಟ್ಟು ಸ್ನೇಹಪರತೆ ಮೆರೆದಿರಬಹುದು.



ಉದರ ಸೇರಿದ ಔಷಧ ಶೂಲೆಯನ್ನು ಶೂಲಕ್ಕೇರಿಸದೇ ಬಿಡುತ್ತದೆಯೇ? ಹೊಟ್ಟೆನೋವು ಕಮ್ಮಿಯಾದ ಖುಷಿಗೆ ಶರ್ಮಿಳಾ ಕಾರಿನೊಳಗೇ ಸಂತೋಷದಿಂದ ಓಲಾಡಿರಬಹುದು. ಆಗ ಡ್ರೈವರ್‌ಗೆ ಬ್ಯಾಲೆನ್ಸ್ ತಪ್ಪಿ ಕಂಬಕ್ಕೆ ಗುದ್ದಿರುತ್ತಾನೆ. ಕಾರಿನಲ್ಲೇನು ಅಲ್ಲಾಡದೇ ಕೂತುಕೊಳ್ಳಲಾಗುತ್ತದೆಯೇ?

ಇನ್ನೂ ಅವರ ಕಾರಿಗೆ ಪೊಲೀಸ್ ಇಲಾಖೆ ಪಾಸ್ ಇದ್ದಿದ್ದು, ಜೆ.ಪಿ. ನಗರದಿಂದ ವಸಂತನಗರಕ್ಕೆ ಔಷಧಿ ತೆಗೆದುಕೊಳ್ಳಲು ಬಂದಿದ್ದು, ಅಷ್ಟೊಂದು ಸ್ನೇಹಿತರ ಜೊತೆಗೆ ಅಡ್ಡಾಡಿದ್ದು, ಪರಸ್ಪರ ವಿರುದ್ಧ ಹೇಳಿಕೆಗಳನ್ನು ಕೊಡುತ್ತ ತಮ್ಮ ಕಾಲ ಮೇಲೆ ತಾವೇ ಕಟ್ಟಿರುವೆ ಬಿಟ್ಟುಕೊಳ್ಳುತ್ತಿರುವುದು ಇವನ್ನೆಲ್ಲ ಪ್ರಶ್ನಿಸುವ ಹಕ್ಕು ಖಂಡಿತ ನಮಗೆ ನಿಮಗೆ ಇಲ್ಲ.

ಏಕೆಂದರೆ ಅವರು ಸೆಲೆಬ್ರಿಟಿ. ಲಾಕ್‌ಡೌನ್ ಏನಿದ್ದರೂ ಶ್ರೀಸಾಮಾನ್ಯರಿಗೆ. ಆಕಾಶದಲ್ಲಿ ಮಿನುಗುವ ತಾರೆಯರನ್ನು ಮನೆಯೊಳಗೆ ಮುಚ್ಚಿಡಲಾಗುತ್ತದೆಯೇ? ■